**ಪಾಠ–13** **ಜೂನ್ 22–28**

# ಅಂತ್ಯಕಾಲದಲ್ಲಿ ಹೃದಯಗಳನ್ನು ತಿರುಗಿಸುವುದು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಮಲಾಕೀಯ 4:5,6, ಮತ್ತಾಯ 11:14,15 ಮತ್ತು 11:10 ಮತ್ತು 1 ಅರಸುಗಳು 16:29–17:24 ಮತ್ತು 1 ಅರಸು 18:20–45; ಮತ್ತಾಯ 3:2.

**ಸ್ಮರಣವಾಕ್ಯ : ನಾನು ಬಂದು ದೇಶವನ್ನು ಶಾಪದಿಂದ ಹತಮಾಡದಂತೆ ಯೆಹೋವನ ಆಗಮನದ ಭಯಂಕರವಾದ ಮಹಾದಿನವು ಬರುವುದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನು ನಿಮ್ಮ ಬಳಿಗೆ ಕಳುಹಿಸುವೆನು. ಅವನು ತಂದೆ ಮನಸ್ಸುಗಳನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು– ಮಲಾ 4:5,6.**

ನಾವು ನಮ್ಮ ಜೀವನವನ್ನು ಹಂತಹಂತವಾಗಿ ಜೀವಿಸುತ್ತೇವೆ. ಕೆಲವು ಸಮಯಗಳಲ್ಲಿ ಈ ಹಂತಗಳು ಸುಲಲಿತವಾಗಿ ಸಾಗುತ್ತವೆ. ಮತ್ತೆ ಕೆಲವು ಸಮುಯಗಳಲ್ಲಿ ಹಾಗೆ ಸಾಗುವುದಿಲ್ಲ, ಕೆಲವು ಸಲ ಕುಟುಂಬಗಳು ಸುಸ್ಥಿತಿಯಲ್ಲಿರುತ್ತವೆ, ಬಲಯುತವಾಗಿರುತ್ತವೆ. ಮತ್ತೆ ಕೆಲವು ಸಲ ಕುಟುಂಬಗಳು ಒಡೆದು ಹೋಗುವಷ್ಟು ಪೆಡಸಾಗಿರುತ್ತವೆ. ಈ ಗಳಿಗೆಯಲ್ಲಿ ನಾವು ಅಥವಾ ನಮ್ಮ ಕುಟುಂಬವು ಯಾವುದೇ ಸ್ಥಿತಿಯಲ್ಲಿರಲಿ, ಹಂತದಲ್ಲಿರಲಿ, ಯಾವುದೇ ಘಟ್ಟದಲ್ಲಿರಲಿ ನಾವು ದೇವರ ವಾಗ್ದಾನಗಳಿಗೆ ಹೃದಯಪೂರ್ವಕವಾಗಿ ಮತ್ತು ಪ್ರಾಣಪೂರ್ವಕವಾಗಿ ಅಂಟಿಕೊಂಡು ಜೀವಿಸಬೇಕು ಕಡೆಯಲ್ಲಿ ಅವುಗಳೇ ನಮ್ಮ

ನಿರೀಕ್ಷೆಯಾಗಿರುತ್ತವೆ. ಆದರೆ ಇವು ಎಂಥಾ ಮಹಾನಿರೀಕ್ಷೆಯಾಗಿವೆ. ದೇವರ ವಾಕ್ಯವು ವಾಗ್ದಾನಗಳನ್ನು ತೋರಿಸುತ್ತದೆ. ಇವು ಎಂಥಾ ವಾಗ್ದಾನಗಳೆಂದರೆ ನಾವಾಗಲಿ ನಮ್ಮ ಕುಟುಂಬವಾಗಲಿ ಯಾವ ಹಂತದ ಜೀವಿತದಲ್ಲಿಯಾದರೂ ಇರಬಹುದು ನಮಗಾಗಿ, ನಮ್ಮ ಪ್ರಿಯರಿಗಾಗಿ, ಕುಟುಂಬದವರಿಗಾಗಿ ಸಭೆಗಾಗಿ ಇವುಗಳನ್ನು (ವಾಗ್ದಾನಗಳನ್ನು) ದೇವರಿಂದ ಹೊಂದುವವರಾಗಿರಬೇಕು.

ಈ ತ್ರೈಮಾಸಿಕದ ಕಡೆಯ ವಾರದಲ್ಲಿ ಸತ್ಯವೇದದಲ್ಲಿರುವ ಕೆಲವು ಕಡೆಗಳನ್ನು, ವಾಗ್ದಾನಗಳನ್ನು ಮತ್ತು ಬೇರೆ ಬೇರೆ ಹಿನ್ನೆಲೆಯಿಂದ ಬಂದಂತಹ ಅನುಭವಗಳನ್ನು ನೋಡುವವರಾಗಿದ್ದೇವೆ. ಇಂದು ಇವುಗಳನ್ನು ನೋಡುವಾಗ ಇವುಗಳಿಂದ ಪಾಠಗಳನ್ನು ಕಲಿಯಲು ಪ್ರಯತ್ನಿಸುತ್ತೇವೆ. ನಿಮ್ಮ ಹಿನ್ನೆಲೆ ಎಂತಹುದೇ ಇರಬಹುದು. ಬಹುಶಃ ನೀವು ಯಾರೇ ಆಗಿರಬಹುದು ಎಲ್ಲೇ ಇರಬಹುದು ಜೀವನದ ಯಾವುದೇ ಹಂತದಲ್ಲಿರಬಹುದು ನಿಮಗೆ ಹೋರಾಟಗಳಿರುತ್ತವೆ ಆತಂಕಗಳಿರುತ್ತವೆ, ಚಿಂತೆಗಳಿರುತ್ತವೆ. ಸುದೈವದಿಂದ ನಾವು ಆರಾಧಿಸುವ ದೇವರಿಗೆ ನಾವು ಏನನ್ನು ಎದುರಿಸುತ್ತಿದ್ದೇವೆ ಎಂಬುದು ಮಾತ್ರವಲ್ಲದೆ ಎಲ್ಲದರಲ್ಲೂ ನಮ್ಮೊಂದಿಗೆ ಇರುತ್ತಾನೆಂದು ನಾವು ಮುಂಚಿತವಾಗಿಯೇ ಖಾತ್ರಿಪಟ್ಟು ಕೊಳ್ಳಬಹುದು. ಈ ವಾರದ ಪಾಠವನ್ನು ಜೂನ್ 29ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಜೂನ್ 23**

## ತಿರುಗಿದ ಹೃದಯಗಳ ಪ್ರವಾದನೆ

ಈ ಘಟನೆಗಾಗಿ ಎಲೀಯನ ಬರುವಿಕೆಯ ಬಗ್ಗೆ ಮುನ್ನುಡಿತವನ್ನು ಹೊಸ ಒಡಂಬಡಿಕೆಯ ಉಲ್ಲೇಖಗಳಿಗೆ ಹೋಲಿಸಿರಿ.

ಮತ್ತಾಯ 4:5,6; ಮತ್ತಾಯ 11:14,15, ಮತ್ತಾಯ 17:10, ಮಾರ್ಕ 6:15, ಲೂಕ 11:17.

ಪ್ರವಾದಿಯಾದ ಮಲಾಕೀಯನ ಕಾಲದಲ್ಲಿ, ಜನಾಂಗಗಳಿಗೆ ದೇವರು ಮನವಿ ಮಾಡಿದುದೇನೆಂದರೆ ನನ್ನ ಕಡೆಗೆ ಪುನಃ ತಿರುಗಿರಿ; ತಿರುಗಿದರೆ ನಾನು ನಿಮ್ಮ ಕಡೆಗೆ ಪುನಃ ತಿರುಗುವೆನು (ಮಲಾಕಿ 3:7). ಬೇಸರಗೊಂಡ ಪ್ರವಾದಿಯು ಪುನರುಜ್ಜೀವನದ ಮತ್ತೊಂದು ಅವಕಾಶವನ್ನು ಸಾರಿ ಹೇಳುತ್ತಾನೆ.

ಎಲೀಯನು "ಹೃದಯವನ್ನು ತಿರುಗಿಸುವ ಸುಧಾರಣೆ"ಯನ್ನು ಮಾಡಿದ ಸಂದರ್ಭವನು ನೆನಪಿಸಿಕೊಳ್ಳಿರಿ (1 ಅರಸು 18:37) ಮತ್ತೆ ಎಲೀಯನು ಬರುತ್ತಾನೆಂದು ಮಲಾಕಿಯ ಪ್ರವಾದನೆ ನುಡಿಯುತ್ತಾನೆ. ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು. ಅವನು ತಂದೆಗಳ ಮನಸ್ಸನ್ನು ಮಕ್ಕಳ ಕಡೆಗೂ ಮಕ್ಕಳ ಮನಸ್ಸನ್ನು ತಂದೆಗಳ ಕಡೆಗೂ ತಿರುಗಿಸುವನು (ಮಲಾಕೀಯ 4:6).

ಎಲೀಯನು ಮೆಸ್ಸೀಯನ ಬರುವಿಕೆಯನ್ನು ಮುಂದಾಗಿ ಹೇಳುವುದಕ್ಕೆ ಮತ್ತೆ ಕಾಣಿಸಿಕೊಳ್ಳುವನು (ಮತ್ತಾಯ 17:10, ಮಾರ್ಕ 6:15 ಜೊತೆ ಹೋಲಿಸಿರಿ). ಆದರೆ ಹೊಸ ಒಡಂಬಡಿಕೆಯು ಸ್ನಾನಿಕನಾದ ಯೋಹಾನನು ಈ ಪ್ರವಾದನೆಯನ್ನು ನೆರವೇರಿಸಿದ ವ್ಯಕ್ತಿಯೆಂದು ಹೇಳುತ್ತದೆ (ಮತ್ತಾ 11:14,15, ಲೂಕ 1:17).

"ಹೃದಯಗಳನ್ನು ತಿರುಗಿಸುವನು" ಎಂಬ ಪದಗುಚ್ಛದ ಅರ್ಥವೇನೆಂದು ತಿಳಿಯುವಿರಿ?

ಈ ಪದಗುಚ್ಛಕ್ಕೆ ಅನೇಕ ಉಪಯೋಗಗಳು ಸಾಧ್ಯವಾಗುತ್ತವೆ; ಇದು ಇಸ್ರಾಯೇಲ್ಯರು ಮತ್ತೆ ಕರ್ತನ ಜೊತೆ ಸಂಧಾನ ಮಾಡಿಕೊಂಡಿದ್ದನ್ನು ಸೂಚಿಸುತ್ತದೆ. ದೇವರು ತಂದೆಯಾಗಿ ಮಕ್ಕಳ ಮೇಲಿದ್ದ ಕೋಪವನ್ನು ಬಿಟ್ಟು ಅವರೊಂದಿಗೆ ಸಂಧಾನ ಮಾಡಿಕೊಂಡು (ಯೆಶಾಯ 63:16) (ಮೀಕ 7:18,19) ಅವರನ್ನು ತನ್ನ ಕಡೆಗೆ ತಿರುಗಿಕೊಂಡು ಬರಬೇಕೆಂದು ಕರೆಯುತ್ತಾನೆ (ಯೆಶಾಯ 44:22, ಮಲಾಕಿ 3:7). ನವೀಕರಣಗೊಂಡ ಒಡಂಬಡಿಕೆಯು ನಂತರದ ಸಂತತಿಗಳು ತಮ್ಮ ನಂಬಿಗಸ್ತಪೂರ್ವಿಕರೊಂದಿಗೆ ಪುನರ್ ಸಂಬಂಧ ಹೊಂದುವುದನ್ನು ಸೂಚಿಸುತ್ತದೆ.

ದೇವರ ಮಕ್ಕಳು ತಮ್ಮ ಪೂರ್ವಿಕರ ನಂಬಿಕೆಯನ್ನು ಅನುಸರಿಸುವಂತೆ ಪ್ರವಾದನಾ ಕರೆಯು ಹಳೆಒಡಂಬಡಿಕೆಯಲ್ಲಿ ಮತ್ತೆ ಮತ್ತೆ ಕೊಡಲ್ಪಟ್ಟಿದೆ. ಈ ಭೂಮಿಯು ವಾಸಿಸುವುದಕ್ಕೆ ಇನ್ನೂ ಆಶೀರ್ವಾದ ಹೊಂದಿದ ಸ್ಥಳವಾಗಿದೆಯೋ

ಎಂಬುದು ಅವರು ಒಡಂಬಡಿಕೆಗೆ ನಂಬಿಗಸ್ತರಾಗಿರಾಗುವುದಕ್ಕೆ ನೇರವಾಗಿ ಸಂಬಂಧಿಸಿರುತ್ತದೆ (ಧರ್ಮ 4:29–31). ಕುಟುಂಬದ ಸಂಬಂಧಗಳ ಮರುಸ್ಥಾಪನೆ ಮತ್ತು ನವೀಕರಣಕ್ಕೆ ಇದು ಸೂಚಿಸುತ್ತದೆ. ತಂದೆತಾಯಿ ಮತ್ತು ಮಕ್ಕಳ ಸಂಬಂಧಗಳು ನಿಜಜೀವನದಲ್ಲಿ ದೇವರೊಂದಿಗಿನ ಒಡಂಬಡಿಕೆಯ ನಂಬಿಗಸ್ತಿಕೆಯನ್ನು ವ್ಯಕ್ತಪಡಿಸುತ್ತವೆ. ಹೆತ್ತವರು ಮತ್ತು ಮಕ್ಕಳ ಜವಾಬ್ದಾರಿಗಳ ನೆರವೇರಿಕೆಯು ಸ್ವಾಸ್ತ್ಯಗಳು ಮತ್ತು ದೇವರ ಆಶೀರ್ವಾದಗಳ ಮುಂದುವರಿಕೆಯು ಒಂದಕ್ಕೊಂದು ಹೆಣೆದುಕೊಂಡಿವೆ.

ಮರುಸ್ಥಾಪಿತಗೊಂಡ ಸಂಬಂಧ ಮತ್ತು ಕುಟುಂಬ ಸಂಬಂಧಗಳ ನಡುವೆ ಏನು ಸಂಬಂಧವಿದೆ? ಒಂದು ಮತ್ತೊಂದಕ್ಕಿಂತ ಮುಂಚಿತವಾಗಿರಬೇಕು ಏಕೆ?

**ಸೋಮವಾರ** **ಜೂನ್ 24**

## ಕುಟುಂಬದ ತಿರುಗಿ ಒಂದಾಗುವುದು

ಇಸ್ರಾಯೇಲ್ಯರ ಅರಸ ಅಹಾಬನ ಹೆಂಡತಿಯಾದ ಈಜೆಬೆಲ್ ರಾಣಿಯ ಬಾಳ್ ದೇವತೆಯ ಪೂಜೆಯನ್ನು ಆರಂಭಿಸಿದಳು. ಇದರಿಂದ ದೇಶದ ನೈತಿಕತೆ ಕೆಳಮುಖವಾಗಿ ಸರಿಯಿತು. ಮದುವೆ, ಕುಟುಂಬ, ಲೈಂಗಿಕತೆಗಳನ್ನು ಕುರಿತ ದೇವರ ಬೋಧನೆಗಳನ್ನು ವ್ಯಭಿಚಾರ, ಸಲ್ಲದಿರುವ ರಕ್ತಸಂಬಂಧಗಳ ಲೈಂಗಿಕತೆ, ವಿಕೃತ ಲೈಂಗಿಕತೆ ಮುಂತಾದ ಕೆಟ್ಟ ಅಭ್ಯಾಸಗಳು ಮುಚ್ಚಿಹಾಕಿದವು. ಆರಾಧನೆಗೆ ಸಂಬಂಧಪಟ್ಟ ಹೋರಾಟದ ಕಣಕ್ಕೆ ಎಲೀಯನು ಪ್ರವೇಶಿಸಿದನು. ಎಲೀಯನು ಎಂಬ ಹೆಸರಿನ ಅರ್ಥವೇನೆಂದರೆ ಯೆಹೋವನು ನನ್ನ ದೇವರು. ಈತನು ಬಾಳ್ ದೇವತೆಯ ಆರಾಧನೆಯನ್ನು ಖಂಡಿಸಿದನು. ಅನ್ಯದೇವತೆಗಳ ಮೇಲಿನ ನಂಬಿಕೆಗಳನ್ನು ತಿರುಗಿಸಿ ಕುಟುಂಬಕ್ಕೆ ಹೊಸಜೀವವನ್ನು ತುಂಬಿದ ಎಲೀಯನ ಅನುಭವಗಳು ಹೇಗೆ ಸಹಾಯ ಮಾಡಿದವು? 1 ಅರಸುಗಳು 16:29–17:24ನ್ನು ಲೂಕ 4:25,26ರ ಜೊತೆ ಹೋಲಿಸಿರಿ.

ದೇಶದಲ್ಲಿ ಬರಗಾಲ ಬರಲಿ ಎಂದು ಎಲೀಯನು ಶಾಪಕೊಟ್ಟದ್ದರಿಂದ ಆತನು ಅಪಾಯಕ್ಕೊಳಗಾದ ಮನುಷ್ಯನಾದನು. ದೇವರು ಆತನಿಗೆ ಚೀದೋನ್ಯರ

ಚಾರೆಪ್ತಾ ಊರಿನಲ್ಲಿದ್ದ ವಿಧವೆಯ ಮನೆಯಲ್ಲಿ ಆಶ್ರಯಕೊಟ್ಟನು. ಅದು ಈಜಬೇಲ್ ರಾಣಿಯ ರಾಣಿಗೆ ಸ್ವಂತ ಊರಾಗಿತ್ತು.

ಎಲೀಯನು ಆ ವಿಧವೆಗೆ ಒಂದು ಕಠಿಣ ಪರೀಕ್ಷೆ ಕೊಟ್ಟನು. ಕಡೆಯ ಜೀವಾಧಾರವಾಗಿ ಅವಳ ಹತ್ತಿರ ಒಂದು ಹಿಡಿ ಹಿಟ್ಟು ಮತ್ತು ಸ್ವಲ್ಪ ಎಣ್ಣೆ ಮಾತ್ರ ಉಳಿದಿತ್ತು. ಎಲೀಯನು ಆಕೆಗೆ "ಒಂದು ರೊಟ್ಟಿ ಮಾಡಿಕೊಂಡು ಬಾ ಮತ್ತು ನಿನ್ನ ಭವಿಷ್ಯದ ಜೀವನಕ್ಕೆ ದೇವರ ಮೇಲೆ ಭರವಸವಿಡು" ಎಂದು ಹೇಳಿದನು. ಅವಳು ನಂಬಿಕೆಯಿಂದ ರೊಟ್ಟಿ ಮಾಡಿಕೊಂಡು ಬಂದಳು, ಅವಳ ನಂಬಿಕೆಯು ಬಹಳ ಪ್ರಸಿದ್ಧವಾಯಿತು. ಮುಂದೆ ಯೇಸುಕ್ರಿಸ್ತನೇ ಅವಳ ಬಗ್ಗೆ ಮೆಚ್ಚಿಕೆಯ ಮಾತಾಡಿದನು (ಲೂಕ 4:26). ಅಳಲ್ಲಿದ್ದ ಒಂದು ಹಿಡಿಹಿಟ್ಟು ಸ್ವಲ್ಪ ಎಣ್ಣೆ ಅನೇಕ ದಿನಗಳವರೆಗೆ ತೀರಿಹೋಗಲಿಲ್ಲ. ಆವಾಗ ಅವಳು ದೇವರ ವಿಷಯವಾಗಿ ಹೆಚ್ಚಾಗಿ ತಿಳುಕೊಂಡಳು. ಆ ನಂತರ ಅವಳ ಮಗನು ರೋಗದಿಂದ ಧಾರುಣವಾಗಿ ಸತ್ತನು. ಅವಳ ಎಲೀಯನ ಮುಂದೆ ದುಃಖಪಡುತ್ತಾ ಇಸ್ರಾಯೇಲ್ಯರು ಧರ್ಮಭ್ರಷ್ಟರಾಗಿರುವುದರಿಂದ ಅವರ ಪಾಪಗಳ ಪರಿಹಾರಕ್ಕೆ ಮಕ್ಕಳು ಬಲಿಯಾಗಬೇಕೆಂದು ಚಿಂತನೆ ಮಾಡಿದಳು (1 ಅರಸುಗಳು 17, 18 ರೊಂದಿಗೆ ಯೆರೆ 19:5 ಮತ್ತು ಮಲಾಕಿ 6:7 ಹೋಲಿಸಿರಿ).

ತನ್ನ ಮಗನು ಮತ್ತೆ ಬದುಕಿದಾಗ ಫೆಯಿನಿಕೆಯ ವಿಧವೆಯ ಆತ್ಮೀಕ ಅನುಭವದ ಮೇಲೆ ಯಾವ ಪರಿಣಾಮ ಬೀರಿತು? 1 ಅರಸು 17:24 ಅವಳ ಪ್ರತಿಕ್ರಿಯೆಯಿಂದ ನಾವು ಏನನ್ನು ಕಲಿಯಬಹುದು?

ಆ ವಿಧವೆಯ (ತಾಯಿಯ) ಪ್ರತಿಕ್ರಿಯೆಯು ಎಲೀಯನ ಸಂದೇಶದ ಪರಿಣಾಮವನ್ನು ವ್ಯಕ್ತಪಡಿಸುತ್ತದೆ. ಆತನ ಪ್ರಾರ್ಥನೆಯಿಂದ ಸತ್ತು ಹೋಗಿದ್ದ ಮಗನು ಮತ್ತೆ ಬದುಕಿ ಬಂದಾಗ ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿ ವಿಧವೆಗೆ ನಂಬಿಕೆ ಹುಟ್ಟಿತು. ಅನೇಕರು ಇಂದು ತಮಗೆ ಬೋಧಿಸಲ್ಪಟ್ಟ ತತ್ವಸಿದ್ಧಾಂತಗಳನ್ನು ಅನುಮೋದಿಸಬಹುದು. ಆದರೆ ನಿಜ ಜೀವನದಲ್ಲಿ ಆತ್ಮೀಕ ಅನುಭವಗಳು ಬಹಳ ಉಗುರು ಬೆಚ್ಚಗಿನದಾಗಿರುತ್ತದೆ. ಆದರೆ ದೇವರ ವಾಕ್ಯಗಳಲ್ಲಿರುವ ಸತ್ಯಗಳನ್ನು ವೈಯಕ್ತಿಕವಾಗಿ ಅನುಭವಿಸಿದಾಗ ಕೌಟುಂಬಿಕ ಸಂಬಂಧಗಳ

ಪುನರುಜ್ಜೀವನ ಮತ್ತು ಸುಧಾರಣೆ ಉಂಟಾಗುತ್ತದೆ. ಆವಾಗ ಇಂದೆಂದಿಗಿಂತಲೂ ಹೆಚ್ಚು ಬಲಯುತವಾದ ಮನವರಿಕೆಯಾಗುತ್ತದೆ.

ನೀವು ಇನ್ನೂ ಕಾಯುತ್ತಿರುವ ಕೌಟುಂಬಿಕ ಐಕ್ಯತೆಗಳಾವುವು? ಐಕ್ಯತೆಯ ನಿರೀಕ್ಷೆಯನ್ನು ಕೊಡುವ ದೇವರ ಯಾವ ವಾಗ್ದಾನಗಳಿಗೆ ನೀವು ಅಂಟಿಕೊಂಡಿದ್ದೀರಿ?

**ಮಂಗಳವಾರ** **ಜೂನ್ 25**

## ಯಜ್ಞವೇದಿಯ ಹತ್ತಿರ ಹೃದಯಗಳನ್ನು ತಿರುಗಿಸುವುದು

ಓದಿರಿ : 1 ಅರಸುಗಳು 18:20–45. ಈ ಕಥೆಯು ಅಗತ್ಯವಾಗಿ ಯಾವುದನ್ನು ಕುರಿತಾಗಿದೆ ಎಂಬುದನ್ನು ಈ ಕೆಳಗಿನ ಸಾಲುಗಳಲ್ಲಿ ಬರೆಯಿರಿ. ಈ ಕಥೆಯಲ್ಲಿರುವ ತತ್ವಗಳು ಕೌಟುಂಬಿಕ ಜೀವನಕ್ಕೆ ಹೇಗೆ ಅನ್ವಯವಾಗುತ್ತವೆ?

ಕಾರ್ಮೆಲಿನ ಬೆಟ್ಟದಲ್ಲಿ ಎಲೀಯನು/ ಇಸ್ರಾಯೇಲ್ಯರೊಂದಿಗೆ ದೇವರ ಒಡಂಬಡಿಕೆಯ ನವೀಕರಣವನ್ನು ಹಂಬಲಿಸಿದನು. ತಮಗೆ ತಮ್ಮ ಮನೆಗಳಿಗೆ ಮತ್ತು ದೇಶಕ್ಕೆ ಒಳ್ಳೆಯದಾಗುವ ಹಾಗೆ ತಮ್ಮ ತಂದೆಗಳಲ್ಲಿದ್ದ ನಂಬಿಕೆಗೆ ತಿರುಗಿಕೊಳ್ಳಬೇಕಿತ್ತು.

ಸಾಯಂಕಾಲದ ಯಜ್ಞದ ಸಮಯ : ಬಾಳ್‌ದೇವತೆಯ ಪ್ರವಾದಿಗಳು ಯಜ್ಞವೇದಿಗೆ ಬೆಂಕಿ ಹೊತ್ತಿಸಲಾರದೆ ಹೋದಾಗ ಎಲೀಯನು ತನ್ನ ಸರದಿಯನ್ನು ತೆಗೆದುಕೊಂಡನು. ಅವನು ಬಹಳ ಜಾಗರೂಕನಾಗಿದ್ದನು. ಆ ದಿನದ ಹಗಲಿನಲ್ಲಿ ಅವರ ಗಮನವನ್ನು ದೇವರ ವಿಮೋಚನೆಯ ಯೋಜನೆಯಿಂದ ಗುಡಾರ ಸೇವೆಗೆ ಸೆಳೆದನು (ವಿ.ಕಾ 29:41ಕ್ಕೆ ಹೋಲಿಸಿರಿ). ಎಲೀಯನು ಜನರನ್ನು ಹತ್ತಿರಕ್ಕೆ ಕರೆದು (1 ಅರಸು 18:30) ಇದು ಕ್ರಿಸ್ತನು ಪಾಪಿಗಳನ್ನು ತನ್ನ ಬಳಿಗೆ ಕರೆದುದ್ದನ್ನು ನೆನಪಿಸುತ್ತದೆ (ಮತ್ತಾಯ 11:28 ರೊಂದಿಗೆ ಹೋಲಿಸಿರಿ). ತಮ್ಮ ಮಗನು ದಾರಿತಪ್ಪಿದ್ದಾನೆಂದು ನೊಂದುಕೊಳ್ಳುವವರು ದೇವರು ತಪ್ಪಿಹೋದ ಇಸ್ರಾಯೇಲ್ಯರನ್ನು ಪ್ರೀತಿಸುವ ಹಾಗೆಯೇ ಅವರ ಮಗನನ್ನು ಅಥವಾ ಮಗಳನ್ನು ಪ್ರೀತಿಸುತ್ತಾನೆಂದು ಭರವಸೆ ಪಡಬಹುದು. ದೇವರು ನಿರಂತರವಾಗಿ ತಪ್ಪಿಹೋದವರನ್ನು ತನ್ನೆಡೆಗೆ ಸೆಳೆಯುತ್ತಾನೆ. ಅಂದು ಎಲೀಯನು ಯೆಹೋವನ

ಯಜ್ಞವೇದಿಯೆಡೆಗೆ ತನ್ನ ಗಮನವನ್ನು ಹರಿಸಿದುದು. ಇಂದು ಕ್ರಿಸ್ತನ ಕೃಪೆಯು ನಮ್ಮ ಕುಟುಂಬಗಳಲ್ಲಿ ಎತ್ತಲ್ಪಡುವುದಕ್ಕೆ ಸಮಾನವಾಗಿದೆ.

ಕೌಟುಂಬಿಕ ಆರಾಧನೆಯು ನಾವು ಆತನ ಬಗ್ಗೆ ಒಬ್ಬರಿಗೊಬ್ಬರು ಮಾತಾಡಿಕೊಳ್ಳುವುದಕ್ಕೆ ಅವನೊಟ್ಟಿಗೆ ಪ್ರಾರ್ಥನೆಗಳಲ್ಲಿ ಸಂಭಾಷಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸುತ್ತದೆ. ನಾವು ಆತನಿಂದ ರಕ್ಷಣೆಯ ವರವನ್ನು ಪಡೆದುಕೊಳ್ಳುತ್ತೇವೆ. ನಮ್ಮ ಹೃದಾಗಳನ್ನು ಆತನಿಗೆ ಕೊಟ್ಟು ಆತನ ಬೋಧನೆಗಳನ್ನು ಪ್ರತಿಫಲಿಸುತ್ತೇವೆ. ಎಲೀಯನ ಮನವಿಗೆ ಸಿಕ್ಕ ಪ್ರತಿಕ್ರಿಯೆಯು ದೇವರು ಇಸ್ರಾಯೇಲ್ಯರನ್ನು ತಿರುಗಿ ಸ್ವೀಕರಿಸಿದನೆಂದು ಸೂಚಿಸುತ್ತದೆ. 1 ಅರಸು 18:37. ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬುದನ್ನು ಇವರಿಗೆ ತಿಳಿಯಪಡಿಸು. ನಾವು ನಮ್ಮ ಹೃದಯಗಳನ್ನು ತಿರುಗಿಸಲಾರೆವು. ಆದರೆ ನಾವು ಆತನ ಕೃಪೆಗೆ ಪ್ರತಿಕ್ರಿಯೆ ತೋರಿಸಬಹುದು. ಅದನ್ನು ಆತನು ನಮಗೆ ಉಚಿತವಾಗಿ ದಯಪಾಲಿಸುತ್ತಾನೆ.

ದಹಿಸುವ ಅಗ್ನಿಯು ದ್ರೋಹಿಗಳ ಮೇಲೆ ಬೀಳಲಿಲ್ಲ. ಆದರೆ ಯಾಜ್ಞವೇದಿಯ ಮೇಲೆ ಬಿತ್ತು. ಇದು ಯೇಸುಕ್ರಿಸ್ತನನ್ನು ಸೂಚಿಸುತ್ತದೆ. ನಾವು ಆತನಲ್ಲಿ ದೇವರ ನೀತಿಯನ್ನು ಹೊಂದಿಕೊಳ್ಳುವ ಹಾಗೆ ಆತನು ಪಾಪಿಯಾಗಿ ಮಾಡಲ್ಪಟ್ಟನು (2 ಕೊರಿ 5:21). ಆವಾಗ ಪಾಪದ ಅರಿಕೆಯು ಸ್ತುತಿ ಸ್ತೋತ್ರಗಳು ಅವರ ಬಾಯಿಗಳಿಂದ ಹೊರಟವು. ಸುಳ್ಳು ಪ್ರವಾದಿಗಳು ಆತನ ಕರೆಗೆ ಓಗೊಡಲಿಲ್ಲವಾದ ಕಾರಣ ಅವರನ್ನೆಲ್ಲಾ ಹಿಡಿದು ವಧಿಸಲಾಯ್ತು. ನಂತರ ದೇಶದ ಶಾಪವು ನೀಗಿ ಮಳೆ ಸುರಿಯಿತು.

ನಿಮ್ಮ ಮನೆಯ "ಯಜ್ಞವೇದಿ"ಯು ಯಾವ ಪರಿಸ್ಥಿತಿಯಲ್ಲಿದೆ? ಅಗತ್ಯವಾದರೆ ನಿರ್ದಿಷ್ಟವಾಗಿ ಯಾವ ವಿಧಾನಗಳಿಂದ ಯಜ್ಞವೇದಿಯನ್ನು ಮತ್ತೆ ನಿಮ್ಮ ಕುಟುಂಬದಲ್ಲಿ ನಿರ್ಮಿಸಬಹುದು?

**ಬುಧವಾರ** **ಜೂನ್ 26**

## ಯೋರ್ದನ್ ಬಳಿ ಹೃದಯಗಳನ್ನು ತಿರುಗಿಸಿದುದು

ಗಬ್ರಿಯೇಲ ದೂತನ ಮುನ್ನುಡಿಯ ಜೊತೆಗೆ (ಲೂಕ 1:17) ಯೇಸುಕ್ರಿಸ್ತನೇ

ಮುಂದೆ ಬರಬೇಕಾದ ಎಲೀಯನೆಂದು ದೃಢಪಡಿಸುತ್ತಾನೆ (ಮತ್ತಾಯ 11:14, 17:12,13). ಸುವಾರ್ತೆಯು ಸ್ನಾನಿಕನಾದ ಯೋಹಾನನನ್ನು ಕರ್ತನ ದೂತನೆಂದು ಕರ್ತನ ದಾರಿಯನ್ನು ಸರಿಪಡಿಸುವವನೆಂದು ದೃಢಪಡಿಸುತ್ತದೆ. ಮತ್ತಾಯ 11:10, ಮಾರ್ಕ 1:2, ಲೂಕ 7:27ನ್ನು ಮಲಾಕಿ 3:1 ರ ಜೊತೆ ಹೋಲಿಸಿರಿ).

ಯೋಹಾನನ ಸಂದೇಶದ ಮುಖ್ಯಾಂಶಗಳನ್ನು ಗಮನಿಸಿರಿ. ಯಾವ ರೀತಿಯಲ್ಲಿ ಅವನ ಸಂದೇಶವು ಹೃದಯವನ್ನು ತಿರುಗಿಸುವಂಥದ್ದಾಗಿದೆ? ಮತ್ತಾಯ 3:2,8, ಮತ್ತಾಯ 14:4, ಮಾರ್ಕ 1:4, ಲೂಕ 3:3, 8, 9, 11, 13, 14.

ವ್ಯವಸಾಯಗಾರನು ಬೀಜವನ್ನು ಬಿತ್ತಲು ಅನುಕೂಲವಾಗುವಂತೆ ನೆಲವನ್ನು ಆಳವಾಗಿ ಉಳುವಂತೆ ಸ್ನಾನಿಕನಾದ ಯೋಹಾನನು ಜನರ ಪಾಪಗಳನ್ನು ಬಹಿರಂಗವಾಗಿ ಖಂಡಿಸಿದನು ಮತ್ತು ಪಾಪಿಗಳಿಗೆ ಪಶ್ಚಾತ್ತಾಪ ಪಡುವಂತೆ ಒತ್ತಾಯಿಸಿದನು. ಮಾನವ ಸ್ವಭಾವ ಹೇಗಿದೆಯೆಂದರೆ ತನ್ನನ್ನು ತಾನು ಆತ್ಮಪರೀಕ್ಷೆ ಮಾಡಿಕೊಳ್ಳದೆ ಹೋದರೆ ತನ್ನ ಪರಿಸ್ಥಿತಿ ಏನೆಂಬುದರ ಅರಿವಿರುವುದಿಲ್ಲ. ಏನಾದರೂ ಉತ್ತಮವಾದುದದರ ಅಗತ್ಯವನ್ನು ಭಾವಿಸಲಾರನು. ದೇವರು ನಮ್ಮಿಂದ ಬಯಸುವ ಪರಿಶುದ್ಧತೆಯೆಡೆಗೆ ಮತ್ತು ನಮಗಾವಶ್ಯಕವಾಗಿರುವ ಆತನ ನೀತಿಯ ಕಡೆಗೆ ನಮ್ಮನ್ನು ತಿರುಗಿಸುತ್ತಾನೆ. ಪ್ರಾಮಾಣಿಕವಾದ ಪಶ್ಚಾತ್ತಾಪಕ್ಕೆ ಗುರುತು ಯಾವುದೆಂದರೆ ದೀನತೆ ಮತ್ತು ತನ್ನ ನಡತೆಯನ್ನು ಬದಲಾಯಿಸಿಕೊಳ್ಳಲು ಅಗತ್ಯವಾದ ಸಹಾಯಕ್ಕಾಗಿ ದೇವರನ್ನು ನೋಡುವುದು. ಯಾರು ಅಬ್ರಹಾಮನನ್ನು ತಮ್ಮ ತಂದೆಯೆಂದು ಹಕ್ಕಿನಿಂದ ಹೇಳುತ್ತಾರೋ ಅವರ ಕಪಟತೆಯನ್ನು ಬಯಲು ಪಡಿಸುತ್ತಾ ಆತನು ಅವರ ತಂದೆಗಳ ನಂಬಿಕೆಗೆ ಆಳವಾದ ಅರ್ಥವನ್ನು ಕೊಡಬಯಸಿದನು. ಸ್ನಾನಿಕ ಯೋಹಾನನ ಸಂದೇಶವು ಹೇಗೆ ಯೇಸುಕ್ರಿಸ್ತನಿಗೆ ಮಾರ್ಗ(ದಾರಿ) ಸಿದ್ಧಪಡಿಸಿತು?

ಯೋಹಾನ 1:35–37 ಮತ್ತು 3:27–30. ಯೋಹಾನನು ಯೇಸುಕ್ರಿಸ್ತನನ್ನು ಲೋಕದ ಪಾಪವನ್ನು ನಿವಾರಿಸುವ ಯಜ್ಞದ ಕುರಿಮರಿಯೆಂದು ಜನರಿಗೆ ಅರಹುತ್ತಾನೆ (ಯೋಹಾನ 1:29). ಆತನು ನಿಜವಾಗಿ ಜನರನ್ನು ಕ್ರಿಸ್ತನೆಡೆಗೆ ತಿರುಗಿಸಿದನು. ಸ್ನಾನಿಕನಾದ ಯೋಹಾನನ ಶಿಷ್ಯರಾದ ಆಂದ್ರೇಯ ಮತ್ತು

ಸೌವಾರ್ತಿಕ ಯೋಹಾನ ಸ್ನಾನಿಕನಾದ ಯೋಹಾನನನ್ನು ಬಿಟ್ಟು ಕ್ರಿಸ್ತನ ಶಿಷ್ಯರಾದರು. ಎಲೀಯನ ಸಂದೇಶವು ಪಶ್ಚಾತ್ತಾಪದ ಕಡೆಗೆ ಮಾತ್ರವಲ್ಲದೆ ಪಾಪದಿಂದ ರಕ್ಷಣೆ ಕೊಡುವವನನ್ನು ಗುರುತಿಸುತ್ತದೆ, ಅವನ ಬಗ್ಗೆ ಸಂಭ್ರಮವನ್ನು ಹುಟ್ಟಿಸುತ್ತದೆ ಮತ್ತು ಜನರನ್ನು ಅವನ ಬಳಿಗೆ ತರುತ್ತದೆ.

ಒಂದು ವೇಳೆ ಸ್ನಾನಿಕನಾದ ಯೋಹಾನನು ನಿಮ್ಮ ಮನೆಯೊಳಗೆ ಪ್ರವೇಶಿಸಿದರೆ ಆತನು ನಿಮಗೆ ಏನನ್ನು ಹೇಳುತ್ತಾನೆ?

**ಗುರುವಾರ** **ಜೂನ್ 27**

## ಕಡೆಯ ದಿನಗಳಲ್ಲಿ ಹೃದಯಗಳನ್ನು ತಿರುಗಿಸುವುದು

ಒಂದು ಅರ್ಥದಲ್ಲಿ ಅಡ್ವೆಂಟಿಸ್ಟರಾದ ನಾವು ಸ್ನಾನಿಕನಾದ ಯೋಹಾನನ ಪಾತ್ರವನ್ನೇ ನಿರ್ವಹಿಸಬೇಕಾಗಿದೆ. ಆತನು ಜನರು ತಮ್ಮ ಪಾಪಿಗಳಿಗೆ ಪಶ್ಚಾತ್ತಾಪ ಪಡಬೇಕೆಂದು ಮತ್ತು ದೇವರ ಕಡೆ ತಿರುಗಿಕೊಳ್ಳಲುಬೇಕೆಂದು ಹೇಳುವ ದೂತನಾಗಿ ಯೇಸುಕ್ರಿಸ್ತನ ಮೊದಲ ಬರೋಣಕ್ಕೆ ದಾರಿಯನ್ನು ಸಿದ್ಧಪಡಿಸಿದನು. ನಾವು ಕೂಡ ಆತನ ಹಾಗೆಯೇ ಯೇಸುಕ್ರಿಸ್ತನ ಎರಡನೇ ಬರೋಣಕ್ಕೆ ಜನರನ್ನು ಸಿದ್ಧಪಡಿಸುವ ಆಂದೋಲನ ನಡೆಸಬೇಕು.

ಪ್ರಾರ್ಥನಾ ಪೂರ್ವಕವಾಗಿ ಓದಿರಿ ಲೂಕ 1:17, ನಮ್ಮ ಸಂದೇಶವನ್ನು ಈ ವಾಕ್ಯಗಳು ಹೇಗೆ ಸೆರೆಹಿಡಿಯುತ್ತವೆ?

ಪರಲೋಕದಲ್ಲಿರುವ ನಮ್ಮ ತಂದೆಯು ತನ್ನ ಮಕ್ಕಳ ಹೃದಯವನ್ನು ತನ್ನ ಕಡೆಗೆ ತಿರುಗಿಸುತ್ತಾನೆ ಮತ್ತು ಕ್ರಿಸ್ತನ ಶಿಲುಬೆಯ ಮೂಲಕ ಜನರು ಪರಸ್ಪರ ಸಹೋದರರ ಕಡೆಗೆ ಹೃದಯಗಳನ್ನು ತಿರುಗಿಸುವಂತೆ ಮಾಡುತ್ತಾನೆ. ಎಲೀಯನ ಸಂದೇಶವು ಅದ್ಭುತವಾದ ಸುವಾರ್ತೆಯನ್ನು ಕುಟುಂಬಗಳು ನಂಬುವಂತೆ ಗೋಗರೆಯುತ್ತದೆ (2 ಕೊರಿಂಥ 5:18–21ನ್ನು ಎಫೆಸ 2:11–18ರ ಜೊತೆ ಹೋಲಿಸಿ ನೋಡಿರಿ) ಮತ್ತು ಆತನ ಆತ್ಮವು ಪ್ರೀತಿಯ ಕೊಯ್ಲಿನಲ್ಲಿ ಬಹಳವಾದ ಇಳುವರಿ ಕೊಡುವುದರಿಂದ ಕೃಪೆಯಿಂದ ತುಂಬಿದ .......... ಕರೆಯುತ್ತಾರೆ.

ನಿಸ್ವಾರ್ಥತೆ, ಆದರಣೆ, ಬದ್ಧತೆ, ಅಚಲವಾದ ಭಕ್ತಿ ಇವುಗಳನ್ನು ನಿಜ ಜೀವಿತದಲ್ಲಿ ಅಳವಡಿಸಿಕೊಂಡಿರುವ ಗಂಭೀರವಾದ ಉದಾಹರಣೆಗಳು ಲೋಕಕ್ಕೆ ಇಂದು ಅಗತ್ಯವಾಗಿದೆ. ದೇವರ ಕೃಪೆಯಿಂದ ಕ್ರೈಸ್ತ ಕುಟುಂಬಗಳು ಇವುಗಳನ್ನು ಲೋಕಕ್ಕೆ ಪ್ರದರ್ಶಿಸಲು ಸಾಧ್ಯವಾಗುತ್ತದೆ. ಆದರೂ ನಾವು ಲೋಕಕ್ಕೆ ಕೊಡಬೇಕಾಗಿರುವ ಸಂದೇಶವು ನಮಗೂ ಅನ್ವಯಿಸುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಸುವಾರ್ತೆಯ ತತ್ವಗಳಾದ ಐಕ್ಯತೆ, ಪ್ರೀತಿ, ಸ್ವತ್ಯಾಗ ಇವುಗಳು ತೋರಿಸಿಕೊಳ್ಳುವವರಿಗೂ ವಿಶೇಷವಾಗಿ ನಮ್ಮ ಕುಟುಂಬಗಳಲ್ಲಿ ತೋರಿಸಿಕೊಳ್ಳುವವರೆಗೂ ಈ ಸಂದೇಶವನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವುದಕ್ಕೆ ನಿರ್ಬಲರಾಗಿರುತ್ತೇವೆ.

ಎಲ್ಲಾ ವಾಕ್ಚಾತುರ್ಯದ ಪ್ರಸಂಗಗಳು ಎಲ್ಲಾ ತಾರ್ಕಿಕವಾದ ಸತ್ಯವೇದ ಸಾದರಗಳು ಸಾಲುವುದಿಲ್ಲ; ನಮ್ಮ ಜೀವಿತಗಳಿಂದ ಲೋಕವು ವಿಶೇಷವಾಗಿ ನಮ್ಮ ಕುಟುಂಬಗಳಲ್ಲಿ ಏನನ್ನು ನೋಡಬಯಸುತ್ತದೆಯೆಂದರೆ, ಪಶ್ಚಾತ್ತಾಪ ತಿರುಗಿದ ಹೃದಯಗಳು, ಪ್ರೀತಿ ಮತ್ತು ನಾವು ಪ್ರಸಂಗಿಸುವದರ ಬದ್ಧತೆ ಇವುಗಳೇ.

ಯೋಹಾನನು ಪರಿಣಾಮಕಾರಿಯಾದ ಬೋಧನೆಗಳಿಂದ ಜನರ ಜೀವಿತಗಳನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿದ್ದನು. ದೇವರ ಕೃಪೆಯಿಂದ ನಾವು ಕೂಡ ಹೀಗೆಯೇ ಮಾಡಬಹುದು. ಆದರೆ ನಾವು ಸಹಕಾರ ನೀಡುವ ಮಟ್ಟಿಗೆ ಮಾತ್ರ ಇದನ್ನು ಮಾಡಬಹುದು.

ನಾವು ಯೇಸುಕ್ರಿಸ್ತನ ಮೂಲಕ ಪರಲೋಕದ ಕುಟುಂಬಕ್ಕೆ ಭಾಗವಾಗಿದ್ದೇವೆ (ಎಫೆಸ 3:15). ನಾವು ಒಬ್ಬರು ಅಥವಾ ಹೆಚ್ಚು ಜನರಿರುವ ಕುಟುಂಬವಾಗಿರಬಹುದು ಆದರೆ ನಾವು ಸೇವಿಸುತ್ತಿರುವ ದೇವರಿಗೆ ಸಾಕ್ಷಿಯಾಗಿರುವುದಕ್ಕೆ ಕರೆಯಲ್ಪಟ್ಟಿದ್ದೇವೆ. ನಮ್ಮ ಕುಟುಂಬವು ಚಿಕ್ಕದಾಗಿರಲಿ ದೊಡ್ಡದಾಗಿರಲಿ ಅದು ಎಂಥದ್ದು ಎಂಬುದನ್ನು ನಾವು ಲೋಕಕ್ಕೆ ತೋರಿಸಿಕೊಡಬೇಕು. ಇದನ್ನು ಒಟ್ಟಾರೆ ಮತ್ಯಾವುದು ನಮ್ಮ ಸಾಕ್ಷಿಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸುವುದಿಲ್ಲ.

ನಿಮ್ಮ ಸ್ವಂತ ಕುಟುಂಬದವರು ಅಥವಾ ನೀವು ಪ್ರೀತಿಸಿ ಲಕ್ಷಿಸುವಂಥ ಒಬ್ಬ ವ್ಯಕ್ತಿಯು ನಿಮಗೆ ಅತಿ ಹತ್ತಿರವಾದವರೆಂದು ತೋರಿಸುವುದಕ್ಕೆ ವಿಶೇಷ ರೀತಿಯಲ್ಲಿ ಏನು ಮಾಡಬಲ್ಲಿರಿ?

**ಶುಕ್ರವಾರ** **ಜೂನ್ 28**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ ಪ್ರಾಫೆಟ್ಸ್ ಮತ್ತು ಕಿಂಗ್ಸ್ ಪುಸ್ತಕದಲ್ಲಿ "ಕಾರ್ಮೆಲ್" ಅಧ್ಯಾಯದಲ್ಲಿ ಪುಟ 143–154. ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ "ದಿ ವಾಯ್ಸ್ ಇನ್ ದಿ ವೈಲ್ಡರ್‌ನೆಸ್" ಅಧ್ಯಾಯದಲ್ಲಿ ಪುಟ 97–108.

ನಮ್ಮ ಸಂದೇಶವು ಸ್ನಾನಿಕನಾದ ಯೋಹಾನನ ಸಂದೇಶದಂತೆ ನೇರವಾಗಿರಬೇಕು. ಆತನು ರಾಜರುಗಳನ್ನು ಅವರ ಅಕ್ರಮಕ್ಕಾಗಿ ಖಂಡಿಸಿದನು. ಆತನು ತನ್ನ ಜೀವಿತಕ್ಕೆ ಎಷ್ಟೇ ಅಪಾಯವಿದ್ದರೂ ಸತ್ಯವು ತನ್ನ ತುಟಿಗಳಲ್ಲಿ ಸೊರಗಿ ಹೋಗುವುದಕ್ಕೆ ಬಿಡಲಿಲ್ಲ. ಈ ಕಾಲಕ್ಕೆ ನಾವು ಅಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗಿದೆ. ಎಲೆನ್ ಜಿ ವೈಟ್‌ರವರ ಕಾಮೆಂಟ್ಸ್, ದಿ ಎಸ್.ಡಿ.ಎ. ಬೈಬಲ್ ಕಾಮೆಂಟರಿ, ಸಂಪುಟ 4, ಪುಟ 1184.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಂದು ತರಗತಿಯಾಗಿ ನಿಮ್ಮ ಸ್ಥಳೀಯ ಸಭೆಗೆ ಎಲೀಯನ ಸಂದೇಶವು ಅನ್ವಯವಾಗುವುದನ್ನು ಚರ್ಚಿಸಿರಿ. ನಿಮ್ಮ ಸಭೆಗೆ ಸಂದೇಶವನ್ನು ಅರ್ಥ ಮಾಡಿಸುವುದಕ್ಕೆ ನೀವೇನು ಸಹಾಯ ಮಾಡುವಿರಿ ಮತ್ತು ಈ ಸಂದೇಶವನ್ನು ಹರಡುವುದಕ್ಕೆ ಸಭೆಯು ಯಾವ ಪಾತ್ರವನ್ನು ವಹಿಸುತ್ತದೆ?

2. ಯಾರು ತಮ್ಮ "ಹೃದಯವು ತಿರುಗಿದೆ" ಎಂದುಕೊಂಡಿದ್ದಾರೋ ಅವರ ವೈಯಕ್ತಿಕ ಅನುಭವವನ್ನು ತರಗತಿಯಲ್ಲಿ ಹಂಚಿಕೊಳ್ಳುವಂತೆ ಮಾಡಿರಿ. ಅವರಲ್ಲಿ ಯಾವ ಬದಲಾವಣೆಗಳು ಆಗಿವೆ? ಈ ಅನುಭವವು ಅವರ ಮತ್ತು ಕುಟುಂಬದವರ ಜೀವಿತದಲ್ಲಿ ಯಾವ ಪರಿಣಾಮವನ್ನು ತಂದಿದೆ?

3. ನಾವು ಸ್ನಾನಿಕನಾದ ಯೋಹಾನನ ಪಾತ್ರದಲ್ಲಿ ನಮ್ಮನ್ನು ಕಂಡುಕೊಂಡರೆ ನಮಗೆ ಏನು ಸಂಭವಿಸಬೇಕೆಂದು ನಿರೀಕ್ಷಿಸುತ್ತೇವೆ? ನಮ್ಮ ಉತ್ತರದಲ್ಲಿ ಅಡಗಿರುವ ಸಂದೇಶವೇನಾಗಿದೆ?

4. "ಕೌಟುಂಬಿಕ ತತ್ವಗಳ ಘೋಷಣೆ" ಎಂಬ ಬರಹವು ಕುಟುಂಬದ ವಿಷಯದಲ್ಲಿ ಸತ್ಯವೇದಾನುಸಾರವಾದ ಆಲೋಚನೆ ಏನೆಂಬುದನ್ನು ಉತ್ತಮವಾದ ರೀತಿಯಲ್ಲಿ ಸಂಕ್ಷಿಪ್ತವಾಗಿ ಒಳಗೊಂಡಿದೆ ಎಂದುಕೊಂಡು ತರಗತಿಯಲ್ಲಿ ಚರ್ಚಿಸಿರಿ. ಈ ತತ್ವಗಳನ್ನು ಕಟ್ಟುವುದಕ್ಕಾಗಿ ಯಾವ ಮಾನದಂಡವನ್ನು ಉಪಯೋಗಿಸಿ ಸಹಾಯ ಮಾಡುವಿರಿ? ಈ ತತ್ವಗಳು ಏನಾಗಿದೆಯೋ ಅವುಗಳನ್ನು ಹಾಗೆ ಸ್ಥಾಪಿಸುವುದಕ್ಕೆ ಸಹಾಯ ಮಾಡುವಂಥ ಯಾವುದನ್ನು ಈ ತ್ರೈಮಾಸಿಕದಲ್ಲಿ ಕಲಿತಿರುವಿರಿ? ಇದನ್ನು ಇಡೀ ಸಭೆಯೊಂದಿಗೆ ಹಂಚಿಕೊಳ್ಳುವುದಕ್ಕೆ ಸಿದ್ಧರಾಗಿರಿ?

5. ಹೆತ್ತವರಾಗಿ ದೇವರಿಂದ ದೂರ ಓಡುತ್ತಿರುವ ನಿಮ್ಮ ಮಕ್ಕಳಿಗೋಸ್ಕರ ಯಾವ ವಾಗ್ದಾನಗಳನ್ನು ಹೊಂದಬಯಸುವಿರಿ?